# <u>ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ</u>

## ಸಿ. ಸಿ. ನಂಃ **518/2019**

ಪಿ.ಡಬ್ಲೂ್ಯ- **10**
ಸಿ.ಡಬ್ಲೂ- **14**

| | | |
|---|---|---|
| ಹೆಸರು | ಃ- | ಯಲ್ಲಪ್ಪ ಶಿಗಿಹಳ್ಳಿ |
| ತಂದೆ / ಗಂಡನ ಹೆಸರು | ಃ- | ಲಕ್ಷ್ಮಣ |
| ವಯಾ | ಃ- | 62 ವರ್ಷ |
| ಉದ್ಯೋಗ | ಃ- | ನಿವೃತ್ತ ಪಿಎಸ್ಐ |
| ವಾಸಸ್ಥಳ | ಃ- | ಬೈಲಹೊಂಗಲ |

ಸತ್ಯ ಪ್ರತಿಜ್ಞೆ ಮೇರೆಗೆ - ದಿನಾಂಕಃ 20-01-2026

***<u>ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ</u>***

ನಾನು ಅಕ್ಟೋಬರ 2017 ರಿಂದ ಅಕ್ಟೋಬರ 2019 ರವರಿಗೆ ಅಣ್ಣಿಗೇರಿಯಲ್ಲಿ ಉಪ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

1) ದಿನಾಂಕ 09-04-2019 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಬೆಳಗ್ಗೆ 11-45 ಗಂಟೆಗೆ ಠಾಣೆಗೆ ಚಾಸಾ-1 ರವರು ಬಂದು ಪ್ರಥಮ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಪ್ರಥಮ ಮಾಹಿಯನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

2) ನಂತರದಲಿ ನಿಪಿ-1 ನ್ನು ಸ್ವೀಕರಿಸಿ ಅಣ್ಣಿಗೇರಿ ಅಪರಾಧ ಸಂಖ್ಯೆ 32/2019 ನ್ನು ದಾಖಲಿಸಿ, ಪ್ರ.ವ.ವ. ನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಪ್ರ.ವ.ವ. ನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.**27** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.27(ಎ) ಎಂದು ಗುರುತಿಸಲಾಯಿತು.

3) ಆನಂತರ ಪ್ರ.ವ.ವ ನ್ನು ದಾಖಲಿಸಿ ಘಟನಾ ಸ್ಥಳವಾದ ಅಣ್ಣಿಗೇರಿ ಬಸ್ಸ ನಿಲ್ದಾಣಕ್ಕೆ ಬೇಟಿ ನೀಡಿ ಅಲ್ಲಿ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರಾಗಿ ಬರಲು ಕೋರಿಕೊಂಡು, ಸದರಿಯವರು ಒಪ್ಪಿಕೊಂಡಿದ್ದು, ಸದರಿಯವರ ಸಮಕ್ಷಮ ಘಟನಾ ಪಂಚನಾಮೆಯನ್ನು ಮದ್ಯಾಹ್ನ 12-30 ರಿಂದ 01-30 ಗಂಟೆಯ ಸಮಯದಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಚಾಯಾಚಿತ್ರವನ್ನು ತೆಗೆದಿದ್ದು ಅದನ್ನು ಈಗಾಗಲೇ ನಿ.ಪಿ.3 ಮತ್ತು ನಿ.ಪಿ.4 ಎಂದು ಗುರುತಿಸಲಾಗಿರುತ್ತದೆ. ಸದರಿ ಸಮಯದಲ್ಲಿ ಕಚ್ಚಾನಕಾಶೆಯನ್ನು ಸಹ ಬಿಡಿಸಿರುತ್ತೇನೆ. ಸದರಿ ನಕಾಶೆಯನ್ನು ನಿ.ಪಿ.2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2(ಇ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ-6 ಮತ್ತು ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಕೇಳಿಕೆಯು ಈಗಾಗಲೇ ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಲಾಗಿರುತ್ತದೆ. ದಿನಾಂಕ 09-04-2019 ರಂದು ಚಾಸಾ-1 ರವರು ಮರುಹೇಳಿಕೆ ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆ ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ.

4) ನಂತರ ದಿನಾಂಕ 10-04-2019 ರಂದು ಪ್ರಕರಣದ ಗಾಯಾಳು ಸಂಜೆ 06-00 ಗಂಟೆಗೆ ಹುಬ್ಬಳ್ಳಿ ಕೀಮ್ಸ ಆಸ್ಪತ್ರೆಯಲ್ಲಿ ಮೃತ ಪಟ್ಟ ಬಗ್ಗೆ ಮಾಹಿತಿ ಬಂದಿರುತ್ತದೆ. ಆದಕಾರಣ ಸದರಿ ಪ್ರಕರಣದ ತನಿಖೆಗೆಂದು ಕಡತವನ್ನು ಚಾಸಾ-15 ರವರಿಗೆ ಹಸ್ತಾಂತರ ಮಾಡಿರುತ್ತೇನೆ.

<u>ಪಾಟೀಸವಾಲು ಃ ಶ್ರೀ ಎಸ ಎ ಪಿ ವಕೀಲರಿಂದ ಃ -</u>

1) ಪ್ರಥಮ ಮಾಹಿತಿಯನ್ನು ನೀಡಲು ಚಾಸಾ-1 ರವರು ಒಬ್ಬರೇ ಬಂದಿರುತ್ತಾರೆ. ಅವರು ಬೆಳಗ್ಗೆ 11-40 ಗಂಟೆಗೆ ಬಂದು ದೂರು ನೀಡುವವರೆಗೆ ಇದ್ದರು. ನಾನು 11-45 ಗಂಟೆಗೆ ದೂರು ಪಡೆದುಕೊಂಡಿರುತ್ತೇನೆ. ನಿಪಿ-1 ದೂರನ್ನು ಚಾಸಾ-1 ರವರು ಗಣಕೀಕೃತ ಮಾಡಿಕೊಂಡು ಬಂದಿರುತ್ತಾರೆ. ನಿಪಿ-1 ಕ್ಕೆ ದಸ್ತುರು ಇರುವುದಿಲ್ಲ.

2) ಘಟನಾ ಸ್ಥಳಕ್ಕೆ ಅದೇ ದಿನ ಸುಮಾರು ಮದ್ಯಾಹ್ನ 12-00 ಗಂಟೆಗೆ ನಾನು ಹಾಗೂ ಸಿಬ್ಬಂದಿ ವರ್ಗದವರು ಹೋಗಿರುತ್ತೇವೆ. ಅವರ ಬ್ಯಾಚ ಸಂಖ್ಯೆ 742 ಇರುತ್ತದೆ. ಘಟನಾ ಸ್ಥಳದ ಉತ್ತರ ದಿಕ್ಕಿಗೆ ನವಲಗುಂದ-ಗದಗ ರಸ್ತೆ, ಪಶ್ಚಿಮಕ್ಕೆ ಆಟೋನಿಲ್ದಾಣ, ಪೂರ್ವಕ್ಕೆ ಬಸ್ಸನಿಲ್ದಾಣ ಇದೆ ಎಂದರೆ ಸರಿ. ನವಲಗುಂದ ಕಡೆಗೆ ಎರಡೂ ರಸ್ತೆ ತಡೆಗಳು ಇದ್ದವು ಎಂದರೆ ಸರಿ. ಸಾಮಾನ್ಯವಾಗಿ

ಸದರಿ ಸ್ಥಳದಲ್ಲಿ ವೇಗದಿಂದ ಚಾಲನೆ ಮಾಡಲು ಆಗುವುದಿಲ್ಲ ಅಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3) ನಾನು ಸ್ಥಳಕ್ಕೆ ಹೋದಾಗ ಬಸ್ಸ ಅಲ್ಲಿಯೆ ಇತ್ತು. ಬಸ್ಸಿಗೆ ಸೆನ್ಸರ ಅಳವಡಿಸಿದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನಾನು ಸಾಕ್ಷಿದಾರರ ಹೇಳಿಕೆ ಹಾಗೂ ಮರುಹೇಳಿಕೆ ಪಡೆದುಕೊಂಡ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಚಾಸಾ-1 ಮತ್ತು ಮೃತಳ ಕುಟುಂಬಕ್ಕೆ ವಿಮೆಯ ಸಹಾಯವಾಗಲು ನಮ್ಮ ಮನೋಸೋಇಚ್ಛೆ ಪ್ರಥಮ ಮಾಹಿತಿಯನ್ನು ಠಾಣೆಯಲ್ಲಿಯೆ ಸೃಷ್ಟಿ ಮಾಡಿ, ನಿಜ ಸಂಗತಿಗಳನ್ನು ಮುಚ್ಚಿಟ್ಟು, ಸುಳ್ಳು ಮಾಹಿತಿಯ ಮೇರೆಗೆ ಪ್ರ.ವ.ವ. ದಾಖಲಿಸಿದ್ದು, ನಾನು ಸದರಿ ಸುಳ್ಳು ದೂರಿನ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆರೋಪಿತನ ತಪ್ಪು ಇರುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**